ದಿನಾಂಕಃ 04-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ಆರೋಪಿಗೆ ನನ್ನ ಮನೆಯಲ್ಲಿ ಹಣವನ್ನು ನೀಡಿರುತ್ತೇನೆ. ನನ್ನ ಮಗನ ಅಪಘಾತದಿಂದ ಬಂದ ಪರಿಹಾರ ಹಣ ಬಂದಿದ್ದು, ಅದು ನನ್ನ ಖಾತೆ ಅಲ್ಲಿ ಇರುತ್ತದೆ. ನಾನು ದಿನಾಂಕ 09.04.2025 ಮತ್ತು 10.04.2025 ರಂದು ನನ್ನ ಖಾತೆಗೆ ತಲಾ ರೂ.1,00,000/- UPI ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಮನೆಯಲ್ಲಿ 3 ವರ್ಷಗಳ ಕಾಲ ಬಾಡಿಗೆಗಾಗಿ ಇದ್ದರು. ಆದರೆ, ನಿಖರವಾದ ಅವಧಿ ನೆನಪಿರುವುದಿಲ್ಲ. ಆರೋಪಿ ನನ್ನಿಂದ ಹಣ ಪಡೆದುಕೊಂಡ ನಂತರ ಮನೆಯನ್ನು ಖಾಲಿ ಮಾಡಿರುತ್ತಾರೆ. 2025 ನೇ ಸಾಲಿನಲ್ಲಿ ರಲ್ಲಿ ಆರೋಪಿ ನಮ್ಮ ಮನೆಯ ಬಾಡಿಗೆ ಇರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಆರೋಪಿ 2022 ನೇ ಸಾಲಿನಲ್ಲಿ ನಮ್ಮ ಮನೆಯನ್ನು ಖಾಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮನೆ ಖಾಲಿ ಮಾಡುವಾಗ ತನಗೆ ಸೇರಿದ ಚೆಕ್ಕನ್ನು ಬಿಟ್ಟು ಹೋಗಿದ್ದು ಅದನ್ನು ನಾನು ದುರುಪಯೋಗ ಪಡೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ತಿಳುವಳಿಕೆ ಪತ್ರಕ್ಕೆ ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಯಾವುದೇ ಸಕಾರಣ ಇಲ್ಲದ ಕಾರಣ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ